ಸಾವಿರ ಕೋಟಿ ಬಗ್ಗೆ ಮೆಮೊರ್ಯಾಂಡಮ್ ಅಂಡರ್‌ಸ್ಟ್ಯಾಂಡಿಂಗ್ ಕನ್‌ಸೆಂಟ್ ಲೆಟರ್, ಸರಕಾರಿ ವ್ಯವಸ್ಥೆ ಬಗ್ಗೆ ಹೇಳಿದ್ದಾರೆ. ಆದರೆ ನಮ್ಮ ಪ್ರಶ್ನೆ ಇಷ್ಟೆ. ಇವತ್ತು ಇಲ್ಲಿ ಬರುವಂತಹ ಯಾವುದೇ ವ್ಯಕ್ತಿ Including Vijayanagar Steel plant they are apprenesive, because you are not equipped.

ಇದು ಸತ್ಯ ನಿಜ ಸಂಗತಿ. ಆದ್ದರಿಂದ ಇದರ ಬಗ್ಗೆ ಚರ್ಚೆ ಮಾಡೋಣ. ಕೊನೆಗೆ end of the day we will have nothing left. ಕರೆಂಟ್ ಇಲ್ಲ, ಇನ್‌ಫ್ರಾಸ್ಟ್ರಕ್ಚರ್ ಇಲ್ಲ, ನಿಮ್ಮಲ್ಲಿ ವ್ಯವಸ್ಥೆ ಇಲ್ಲ, ನೀರು ಇಲ್ಲ, ಆದ್ದರಿಂದ ಸುಮ್ಮನೆ ಯಾವುದೋ ಕಾಣದ ಕನಸಿನಂಥ ಸಾಗರವನ್ನು, ಒಂದು ಅಂತಃಪುರವನ್ನು ಕಟ್ಟುವುದು ಬೇಡ. ರಿಯ್ಯಾಲಿಟಿ ಮಾಡೋಣ. ಇನ್‌ಫ್ರಾಸ್ಟ್ರಕ್ಚರ್ ಮಾಡೋಣ. ಹೊಸ ವ್ಯವಸ್ಥೆಗೆ ಹೆಚ್ಚಿನ ಸಹಕಾರ ಕೊಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ,

ಉಪಾಧ್ಯಕ್ಷರು : ನಿಮಗೆ ಇನ್ನೂ ಎಷ್ಟು ಸಮಯ ಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನನಗೆ ಇನ್ನೂ 15-20 ನಿಮಿಷ ಬೇಕಾಗುತ್ತದೆ.

ಉಪಾಧ್ಯಕ್ಷರು : ಹಾಗಾದರೆ ಲಂಚ್ ಬ್ರೇಕ್ ನಂತರ ತಾವು ಮಾತನಾಡಬಹುದಲ್ಲವೇ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆಯಿತು, ನನಗೆ ಒಂದು ಕಡೆ ಬಿ.ಜೆ.ಪಿ. ಯವರ ಕಾಟ, ಒಂದು ಕಡೆ ಜನತಾದಳದವರ ಕಾಟ ಇವರ ಮಧ್ಯದಲ್ಲಿ ನಾವು ಸಿಕ್ಕಿಕೊಂಡು ಒದ್ದಾಡುತ್ತಿರುವಾಗ ನಮ್ಮನ್ನು ನೀವೇ ರಕ್ಷಣೆ ಮಾಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಇವತ್ತು ಎಂಟು ಗಂಟೆಯವರೆಗೂ ನಾವು ಕುಳಿತುಕೊಳ್ಳಬೇಕು ಎಂದು ಯೋಚನೆ ಮಾಡಿದ್ದೇವೆ. ಅದಕ್ಕೋಸ್ಕರ ದಯಮಾಡಿ ಬೇರೆಯವರನ್ನು ಕೂಡಿಸಿ. ಊಟಕ್ಕೆ ಬಿಡುವ ಅಗತ್ಯವಿಲ್ಲ, ನಾವೆಲ್ಲಾ ಹೋಗಿ ಬಂದು ಮಾಡುತ್ತಿದ್ದೇವೆ. ಸದನದ ಕಾರ್ಯಕಲಾಪ ನಡೆಯಬೇಕಾಗಿದೆ. ಲಂಚ್‌ಬ್ರೇಕ್ ಬೇಡ ಎಂದು. ಏಕೆಂದರೆ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಕುಳಿತಾಗ ನೀವು ಲಂಚ್‌ಗೆ ಬಿಟ್ಟರೆ ನನ್ನ ಅಭ್ಯಂತರವಿಲ್ಲ, ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಕುಳಿತಾಗ ನಾವು ಚರ್ಚೆ ಮಾಡಿದಾಗ ಬಂದಿರುವಂಥ ತೀರ್ಮಾನ ದಯಮಾಡಿ ಮಧ್ಯದಲ್ಲಿ ಬ್ರೇಕ್ ಮಾಡದೆ ಎಂಟು ಗಂಟೆಯಾದರೂ ಕುಳಿತುಕೊಳ್ಳಬೇಕು. ಭಾಗವಹಿಸುವವರು ತುಂಬಾ ಜನ ಇದ್ದಾರೆ ಎಂದು ಯೋಚಿಸಿದೆವು. ಸಲಹೆ ಕೊಡುತ್ತಿದ್ದೇನೆ. ಸದನ ಒಪ್ಪಿದರೆ ನಮ್ಮ ಸಲಹೆಯನ್ನು ಸ್ವೀಕರಿಸಿ. ಇಲ್ಲದಿದ್ದರೆ ನೀವು ಹೇಗೆ ಮಾಡುತ್ತೀರೋ ಹಾಗೆ ಮಾಡಿ.

ಉಪಾಧ್ಯಕ್ಷರು : ಈಗ ನಮ್ಮ ಪ್ರೋಗ್ರಾಮ್ ಪ್ರಕಾರ ಮುಂಜಾನೆ 9-30 ರಿಂದ 1-30 ರವರೆಗೆ ಎಂದು ಇತ್ತು. ಆಮೇಲೆ 2-30 ರಿಂದ 6-30 ರವರೆಗೆ ಪ್ರೋಗ್ರಾಮ್. ಆ ವಿಷಯ ಹೇಳುತ್ತಿದ್ದೇನೆ. ಒಂದು ವೇಳೆ ಸದಸ್ಯರು ಆಪೇಕ್ಷೆ ಪಡದಿದ್ದರೆ ಬೇಡ.

ಶ್ರೀ ಸಿ. ಭೈರೇಗೌಡ : ಈಗ ನಮ್ಮ ಕಡೆ ಸದಸ್ಯರು ಕಡಿಮೆ ಇದ್ದಾರೆ. ಊಟ ಮಾಡಬೇಕಾಗಿದೆ. ಅದರಿಂದ ನಾವು ಲಂಚ್‌ಗೆ ಬ್ರೇಕ್ ಮಾಡೋಣ.

**ಪ್ರಕಟಣೆ - 1**

ಉಪಾಧ್ಯಕ್ಷರು : ಶ್ರೀ ಮಲ್ಲಿಕಾರ್ಜುನ ಖರ್ಗೆಯವರನ್ನು ವಿಧಾನಸಭೆಯಲ್ಲಿ ಕಾಂಗ್ರೆಸ್ (ಐ) ಪಕ್ಷದ ನಾಯಕರಾಗಿ ಚುನಾಯಿಸಿದ್ದೇವೆಂದು ತಿಳಿಸುವ ಕರ್ನಾಟಕ ಪ್ರದೇಶ ಕಾಂಗ್ರೆಸ್ (ಐ) ಸಮಿತಿಯ ಅಧ್ಯಕ್ಷರ ಪತ್ರವೊಂದು ನನಗೆ ಬಂದಿದೆ.

ಕಾಂಗ್ರೆಸ್ (ಐ) ಪಕ್ಷವು ಮಾನ್ಯತೆಯ ಷರತ್ತುಗಳನ್ನು ಪೂರೈಸಿರುವುದರಿಂದಾಗಿ, ಸದರಿ ಪಕ್ಷವನ್ನು ವಿಧಾನಮಂಡಲದ ಪಕ್ಷವೆಂದೂ ಹಾಗೂ ಅದರ ನಾಯಕರಾದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರನ್ನು ಸದನದಲ್ಲಿ ಕಾಂಗ್ರೆಸ್(ಐ) ಪಕ್ಷದ ನಾಯಕರೆಂದು ಮನ್ನಣೆ ನೀಡುತ್ತೇನೆ.

**ಪ್ರಕಟಣೆ – 2**

ಉಪಾಧ್ಯಕ್ಷರು : ಶ್ರೀ ಎಸ್. ಬಂಗಾರಪ್ಪ, ಮಾನ್ಯ ವಿಧಾನಸಭಾ ಸದಸ್ಯರು ಹಾಗೂ ಅಧ್ಯಕ್ಷರು, ಕರ್ನಾಟಕ ಕಾಂಗ್ರೆಸ್ ಪಕ್ಷ ಅವರು ದಿನಾಂಕ 23ನೇ ಡಿಸೆಂಬರ್, 1994 ರಂದು ಪತ್ರ ಬರೆದು ಅದರಲ್ಲಿ ಶ್ರೀ ಎಸ್. ಬಂಗಾರಪ್ಪನವರು ಆ ಪಕ್ಷದ ನಾಯಕರು, ಶ್ರೀ ಮಾಲೀಕಯ್ಯ ಗುತ್ತೇದಾರ್, ಉಪ ನಾಯಕರು, ಶ್ರೀ ಎನ್. ಬಸವಯ್ಯ, ಕಾರ್ಯದರ್ಶಿ ಹಾಗೂ ಶ್ರೀ ಯು.ಆರ್. ಸಭಾಪತಿ, ಮುಖ್ಯ ಸಚೇತಕರು ಎಂದು ತಿಳಿಸಿರುತ್ತಾರೆ.

ಕರ್ನಾಟಕ ಕಾಂಗ್ರೆಸ್ ಪಕ್ಷವು ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 2(2) ರ ರೀತ್ಯಾ ವಿಧಾನಮಂಡಲದ ತಂಡವೆಂದು ಪರಿಗಣಿಸಲು ಹೇಳಲಾದ ಷರತ್ತುಗಳನ್ನು ಪೂರೈಸಿದ್ದು, ಸದರಿ ಪಕ್ಷವನ್ನು ವಿಧಾನ ಮಂಡಲ ತಂಡದ ಪಕ್ಷವೆಂದೂ ಹಾಗೂ ಶ್ರೀ ಎಸ್. ಬಂಗಾರಪ್ಪನವರನ್ನು ಆ ತಂಡದ ನಾಯಕರಾಗಿ, ಶ್ರೀ ಮಾಲೀಕಯ್ಯ ಗುತ್ತೇದಾರ್, ಉಪನಾಯಕರಾಗಿ, ಶ್ರೀ ಎಸ್. ಬಸವಯ್ಯ, ಕಾರ್ಯದರ್ಶಿಯಾಗಿ ಹಾಗೂ ಶ್ರೀ ಯು.ಆರ್. ಸಭಾಪತಿ ಮುಖ್ಯ ಸಚೇತಕರೆಂದು ಮನ್ನಣೆ ನೀಡುತ್ತೇನೆ.

**ಪ್ರಕಟಣೆ – 3**

ಉಪಾಧ್ಯಕ್ಷರು : ಶ್ರೀ ಬಿ.ಎಸ್. ಯಡಿಯೂರಪ್ಪ, ಮಾನ್ಯ ವಿರೋಧ ಪಕ್ಷದ ನಾಯಕರು ದಿನಾಂಕ: 29-12-1994 ರಂದು ಪತ್ರ ಬರೆದು ವಿಧಾನ ಸಭೆಯಲ್ಲಿ ತಮ್ಮ ಪಕ್ಷದ ಶ್ರೀ ವೈ. ರಾಮಕೃಷ್ಣ, ಅವರನ್ನು ಉಪನಾಯಕರಾಗಿ, ಶ್ರೀ ರುಕ್ಮಯ್ಯ ಪೂಜಾರಿ ಅವರನ್ನು ಮುಖ್ಯ ಸಚೇತಕರಾಗಿ, ಶ್ರೀ ವಿಜಯಶಂಕರ್ ಅವರನ್ನು ಕಾರ್ಯದರ್ಶಿಯಾಗಿ ಹಾಗೂ ಡಾ॥ ಚಿತ್ತರಂಜನ್ ಅವರನ್ನು ಖಜಾಂಚಿಯಾಗಿ ನೇಮಿಸಲಾಗಿದೆಯೆಂದು ತಿಳಿಸಿರುತ್ತಾರೆ. ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 2(2) ರ ರೀತ್ಯಾ ಹೇಳಲಾದ ಷರತ್ತುಗಳನ್ನು ಭಾರತೀಯ ಜನತಾ ಪಕ್ಷವು ಪೂರೈಸಿದ್ದು, ಶ್ರೀ ವೈ. ರಾಮಕೃಷ್ಣ ಉಪನಾಯಕರಾಗಿ, ಶ್ರೀ ರುಕ್ಮಯ್ಯ ಪೂಜಾರಿ, ಮುಖ್ಯ ಸಚೇತಕರಾಗಿ, ಶ್ರೀ ವಿಜಯಶಂಕರ್ ಕಾರ್ಯದರ್ಶಿಯಾಗಿ ಹಾಗೂ ಡಾ॥ ಚಿತ್ತರಂಜನ್, ಖಜಾಂಜಿಯಾಗಿ ಮನ್ನಣೆ ನೀಡಿರುತ್ತೇನೆ.

**ಪ್ರಕಟಣೆ – 4**

ಉಪಾಧ್ಯಕ್ಷರು : ಶ್ರೀ ಜಿ.ಎಸ್. ಶಿವನಂಜಪ್ಪ, ಸದಸ್ಯರು ಹಾಗೂ ಪಕ್ಷೇತರ ಶಾಸಕರ ಒಕ್ಕೂಟದ ಅಧ್ಯಕ್ಷರು ಇವರು ದಿನಾಂಕ 28-12-1994 ರಂದು ಪತ್ರ ಬರೆದು ವಿಧಾನಸಭೆಯಲ್ಲಿ ತಮ್ಮನ್ನು ಪಕ್ಷೇತರ ಶಾಸಕರ ಒಕ್ಕೂಟದ ನಾಯಕರನ್ನಾಗಿ ಹಾಗೂ ಶ್ರೀ ಎಲ್.ಆರ್. ಶಿವರಾಮೇಗೌಡ, ಸದಸ್ಯರು ಇವರನ್ನು ಉಪ ನಾಯಕರನ್ನಾಗಿ ನೇಮಿಸಲಾಗಿದೆಯೆಂದು ತಿಳಿಸಿರುತ್ತಾರೆ.

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 2(2) ರ ರೀತ್ಯಾ ಹೇಳಲಾದ ಷರತ್ತುಗಳನ್ನು ಪಕ್ಷೇತರ ಶಾಸಕರ ಒಕ್ಕೂಟವು ಪೂರೈಸಿದ್ದು ಶ್ರೀ ಜಿ.ಎಸ್. ಶಿವನಂಜಪ್ಪ ನಾಯಕರಾಗಿ, ಹಾಗೂ ಶ್ರೀ ಎಲ್.ಆರ್. ಶಿವನಂಜಪ್ಪ

ನಾಯಕರಾಗಿ, ಹಾಗೂ ಶ್ರೀ ಎಲ್.ಆರ್. ಶಿವರಾಮೇಗೌಡ ಉಪನಾಯಕರಾಗಿ ಮನ್ನಡೆ ನೀಡುತ್ತೇನೆ.

ಉಪಾಧ್ಯಕ್ಷರು : ಈಗ ಸದನವು ಮುಂದುವರೆದು ಮತ್ತೆ 2-30 ಗಂಟೆಗೆ ಸೇರುತ್ತದೆ.

(ಸಭೆಯು 1-44ಕ್ಕೆ ಮುಕ್ತಾಯಗೊಂಡಿತ್ತು. ಮತ್ತೆ 2-30 ಗಂಟೆಗೆ ಸಭೆಯು ಸಮಾವೇಶಗೊಳ್ಳುವುದು.)

(ಸದನವು ಪುನಃ ಮಧ್ಯಾಹ್ನ 2 ಗಂಟೆ 55 ನಿಮಿಷಕ್ಕೆ ಸಮಾವೇಶಗೊಂಡಿತು.)

(ಅಧ್ಯಕ್ಷರಾದ ಶ್ರೀ ರಮೇಶ್‌ಕುಮಾರ್‌ರವರು, ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿದ್ದರು.)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸನ್ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದೇನೆ. ವಿಶೇಷವಾಗಿ ಕಾನೂನು ವ್ಯವಸ್ಥೆ ಬಗ್ಗೆಮತ್ತು ಕೋ-ಆಪರೇಟಿವ್ ಇಲಾಖಾ ವತಿಯಿಂದ, ಪೀನಲ್ ಇಂಟರೆಸ್ಟ್ ಮತ್ತು ಬಡ್ಡಿಯನ್ನು ಮಾಫಿ ಮಾಡುವುದರ ಬಗ್ಗೆ ಕೃಷ್ಣ ಬೇಸಿನ್ ಡೆವಲಪ್‌ಮೆಂಟ್ ಅಥಾರಿಟಿ ಬಗ್ಗೆ ಹಾಗೂ ನಮ್ಮ ಫಾರಿನ್ ಇನ್‌ವೆಸ್ಟ್‌ಮೆಂಟ್, ಏನು ಇಂಡಸ್ಟ್ರೀಗಳಲ್ಲಿ, ಈ ಇಲಾಖೆಗಳಲ್ಲಿ ಹೊರದೇಶದ ಬಂಡವಾಳವನ್ನು ತಂದು ಹೂಡುತ್ತಿದ್ದಾರೆ. ಇದಕ್ಕೆ ಒಂದು ಸಮಿತಿಯನ್ನು ರಚನೆ....

ಶ್ರೀ ಜಿ.ಎಸ್. ಶಿವನಂಜಪ್ಪ : ಮಾನ್ಯ ಅಧ್ಯಕ್ಷರೆ, ಸದನದಲ್ಲಿ ಯಾರೂ ಮಂತ್ರಿಗಳೇ ಇಲ್ಲ. ಮಾನ್ಯ ಖರ್ಗೆಯವರಂಥ ಹಿರಿಯ ಸದಸ್ಯರು ಮಾತನಾಡುವಾಗ, ಮಂತ್ರಿಗಳು ಯಾರೂ ಇಲ್ಲದೆ, ಈ ಸದನವನ್ನು ಇಷ್ಟು ಲಘುವಾಗಿ ತೆಗೆದುಕೊಂಡರೆ, ಬಹಳ ಕಷ್ಟವಾಗುತ್ತದೆ.

ಅಧ್ಯಕ್ಷರು : ಮಾನ್ಯ ಗೃಹಮಂತ್ರಿಗಳಾದ ಸಿಂಧ್ಯರವರು ಇದ್ದಾರೆ. ಹಿರಿಯ ಸದಸ್ಯರಾದ ನೀವು ಇದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಯಾರು ಇಲ್ಲದೇ ಇದ್ದರೂ ಕೂಡ, ನಾವು ಏನು ಹೇಳಿ ಹೋಗಬೇಕೋ ಅದನ್ನು ಹೇಳಿ ಹೋಗುತ್ತೇನೆ, ಆ ಮಾತು ಬೇರೆ. ಆದರೆ, ಅಧ್ಯಕ್ಷರೇ, ತಮಗೆ ಗೊತ್ತಿದೆ. ಈ ಸರ್ಕಾರ ಹುಟ್ಟಿ ಇನ್ನೂ 15 ದಿವಸಗಳಾಗಿಲ್ಲ. ಅಷ್ಟರಲ್ಲಿಯೇ ಈ ಪರಿಸ್ಥಿತಿಯಾದರೆ, ಇನ್ನು 5 ವರ್ಷ ಹೀಗೆಯೇ ನಡೆದುಕೊಂಡು ಹೋದರೆ, ಯಾವ ರೀತಿಯಾಗಿ ಆಡಳಿತ ನಡೆಸುತ್ತಾರೆ? ಮಂತ್ರಿಗಳು ಸದನದಲ್ಲಿ ಕುಳಿತುಕೊಳ್ಳಬೇಕು, ನೋಡಬೇಕು, ಕಲಿಯಬೇಕು ಎನ್ನುವ ಅಭಿಪ್ರಾಯ ಇಲ್ಲದೇ ಇದ್ದರೆ ಹೇಗೆ?

ಒಬ್ಬ ಮಾನ್ಯ ಸದಸ್ಯರು : ಮಂತ್ರಿಮಂಡಲದ ವಿಸ್ತರಣೆ ವಿಷಯಕ್ಕೆ ಹೋಗಿರಬಹುದು....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :ವಿಸ್ತರಣೆ, ಕನಿಷ್ಟ ಪಕ್ಷ ಏಪ್ರಿಲ್‌ವರೆಗೆ ಕಡಿವಾಣ ಇದೆ, ಏಪ್ರಿಲ್ ಆದ ಮೇಲೆ ನೋಡೋಣ. ಮಂತ್ರಿಮಂಡಲದ ವಿಸ್ತರಣೆಯನ್ನು ಏಪ್ರಿಲ್ ಮತ್ತು ಮೇನಲ್ಲಿ ಮಾಡುತ್ತಾರೆ. ಸನ್ಮಾನ್ಯ ಅಧ್ಯಕ್ಷರೇ, ನಾವು ಧರಣ ಮಾಡುತ್ತೇವೆ, ನೀವು ಬರೀ ಹುಡುಪೇಟೆ ಮಾಡಿಕೊಂಡು ಹೋಗುತ್ತಿದ್ದೀರಿ, ಅದಕ್ಕೆ ಭಯ ಆಗಿದೆ. ಮತ್ತೆ ಬೇರೆ ಏನೂ ಇಲ್ಲ. ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ತಾವು ಮಾಡಿದ್ದೀರಿ.

ನಾನು ಇದರ ಬಗ್ಗೆ ಹೇಳಿದ್ದೇನೆ. ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಹೈಪವರ್ ಕಮಿಟಿ ರಚನೆ ಮಾಡಿದರೆ, ಅದು ಪ್ರಯೋಜನವಾಗುವುದಿಲ್ಲ. ಏಕೆಂದರೆ, ಅವರಿಗೆ